OS No. 185/2021 PW-2

<u>ದಿನಾಂಕ 25.11.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ವಕೀಲರಿಂದಃ</u>

ನಾನು ದಾವಾ ಸ್ವತ್ತನ್ನು ಕಣ್ಣಾರೆ ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಪಂಪ್ ಸೆಟ್ ಹೌಸ್ ಇದೆ. ದಾವಾ ಆಸ್ತಿ 4 ಎಕರೆ ಇದೆ. ಕರಾರಾದ 1 ವಾರದ ಹಿಂದೆ ಮಾತುಕತೆಗೆ ಸೇರಿದ್ದೆವು. ಕರಾರು ಪತ್ರವನ್ನು ಪ್ರತಿವಾದಿ ತಂದಿರುತ್ತಾರೆ . ಕರಾರು ಪತ್ರ ತಯಾರಾಗುವಾಗ ನಾನು ಹಾಜರಿದ್ದೆ. ಪ್ರತಿವಾದಿಯ ಅಂಗಡಿಯ ಬಳಿ ಹಣವನ್ನು ಕೊಟ್ಟಿರುತ್ತಾರೆ. ನಾನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ದಾವಾ ಆಸ್ತಿ 1 ವರೆ ಕೋಟಿ ಬೆಲೆಬಾಳುತ್ತವೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 30-35 ಲಕ್ಷ ಆಗುತ್ತದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಯ ನಡುವೆ ಸಾಲದ ವ್ಯವಹಾರ ನಡೆದಿದೆ ಎಂದರೆ ಸುಳ್ಳು. ಸಾಲಕ್ಕೆ ಬಡ್ಡಿ 2 % ಆಗಿತ್ತು ಎಂದರೆ ಸುಳ್ಳು. ಸಾಲದ ವಿಷಯಕ್ಕೆ ನಾನು ಸಹಿ ಮಾಡಿದ್ದೇನೆಂದರೆ ಸುಳ್ಳು. ಪ್ರತಿವಾದಿ ಚನ್ನಪಟ್ಟಣದಲ್ಲಿ ಕಟ್ಟಡ ಕಟ್ಟಿದ್ದಾರೆಂದರೆ ನಿಜ. ಆದ್ದರಿಂದ ವಾದಿಯ ಬಳಿ ಸಾಲ ಪಡೆದಿದ್ದರು ಎಂದರೆ ಸುಳ್ಳು. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನಾನು ಜಮೀನು ವ್ಯವಹಾರ ಮಾಡುತ್ತೇನೆಂದರೆ ಸಾಕ್ಷಿಯು ಚಾಕಿ ಹುಳು ವ್ಯವಹಾರ ಮಾಡುತ್ತೇನೆಂದು ನುಡಿಯುತ್ತಾರೆ. ನಾನು ಜಮೀನು ವ್ಯವಹಾರ ಮಾಡುತ್ತೇನೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.